
# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2550/ಶ್ರೀ ಕ್ರೋಧಿ ನಾಮ ಸಂವತ್ಸರ
**15-07-2024 ಆಷಾಢ ಮಾಸ : ಶುಕ್ಲ ಪಕ್ಷ ಸೋಮವಾರ**

ಪುಟ : ೪ ಸಂಪುಟ : ೨೦ ಸಂಚಿಕೆ : ೦೭

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## 'ಗುರುವಿನೆಡೆಗೆ'

ಈ ಸಂಸಾರದಲ್ಲಿ "ಗುರು"ವಿನ ಸ್ಥಾನ ಅತ್ಯಂತ ಮಹತ್ತ್ವವಾದುದು. ಮನೆಯಲ್ಲಿ ಒಬ್ಬ ವ್ಯಕ್ತಿಯ ಜೀವನವು ತಂದೆ, ತಾಯಿಗಳಿಂದ ಆರಂಭವಾಗಿ ಜೀವಾತ್ಮ ಪರಮಾತ್ಮನಾಗುವವರೆಗೂ ಅನೇಕರು ನಿರ್ಣಾಯಕರಾಗುತ್ತಾರೆ. ಈ ಭಾರತ ಭೂಮಿಯಲ್ಲಿ "ಗುರು"ವನ್ನು ಅತ್ಯಂತ ಪವಿತ್ರ, ಪೂಜನೀಯರಾಗಿ ನೋಡುತ್ತೇವೆ. ದೇವರ ಸಮನಾಗಿ ಕಾಣುತ್ತೇವೆ. ಗುರುವಿನ ಮಾರ್ಗದರ್ಶನವೇ ನಿಶ್ಚಿತ ಗುರಿಯ ತಲುಪಲು ಸಹಾಯಕವಾಗುತ್ತದೆ. ಸನಾತನ ಧರ್ಮಗಳಲ್ಲಿ ಗುರುವನ್ನು ಮುಕ್ತಿ ಪಥದ ಪ್ರೇರಕನನ್ನಾಗಿ ಗೌರವಿಸಿದ್ದಾರೆ.

ಜೈನ ಧರ್ಮದಲ್ಲಿ "ಗುರು"ವನ್ನು ಸಂಸಾರ ಸಾಗರದಿಂದ ಪಾರು ಮಾಡುವ ನಾವಿಕರಂತೆ ಕೊಂಡಾಡಿದ್ದಾರೆ. ಜೈನರ ಪವಿತ್ರ ಮಂತ್ರವಾದ "ಣಮೋಕಾರ" ಮಂತ್ರದಲ್ಲಿ ಐದು ಪರಮೇಷ್ಠಿಗಳಲ್ಲಿ ಮೂರು ಜನರನ್ನು ಪರಮ ಉಪಕಾರಿಗಳಾಗಿ, ಪ್ರತಿಯೊಂದು ಜೀವಿಯು ಆತ್ಮ ಸುಖವನ್ನು ಹೊಂದಲು ಸತತ ಕೃಪೆ ಅವರದ್ದಿದೆ ಎಂದಿರುತ್ತಾರೆ. ಅವರೆಂದರೆ ಆಚಾರ್ಯ, ಉಪಾಧ್ಯಾಯ ಹಾಗೂ ಸಾಧು (ಮುನಿ)ಗಳು ಗುರುಗಳೆನಿಸಿದ್ದಾರೆ. ಹಾಗೆ ಸಂಸಾರದಲ್ಲಿ ತಂದೆ, ತಾಯಿ, ಶಾಲೆಯಲ್ಲಿನ ಅಧ್ಯಾಪಕರು, ಸನ್ಮಿತ್ರರು ಇತ್ಯಾದಿ ಅನೇಕರನ್ನು ಗುರುವಿನ ಸ್ಥಾನದಲ್ಲಿ ಗುರುತಿಸಿದರೂ, ಉತ್ಕೃಷ್ಟವಾದ ತ್ಯಾಗ ಪರಂಪರೆಯಲ್ಲಿ ನಡೆಯುತ್ತಿರುವ ದಿಗಂಬರ ಮುನಿಗಳನ್ನು ಗುರುವೆಂದು ಜೈನರು ಪೂಜಿಸುತ್ತಾರೆ.

ಜೈನ ಆಗಮಗಳಲ್ಲಿ ದೀಕ್ಷಾ ಗುರು, ಶಿಕ್ಷಾ (ವಿದ್ಯೆ) ಗುರು, ಪರಮ ಗುರು ಇತ್ಯಾದಿ ಭೇದಗಳಿಂದಲೂ 'ಗುರು' ಸ್ಥಾನವನ್ನು ಹೇಳಿರುತ್ತಾರೆ. 'ಅರಿಹಂತ' ಭಗವಂತನೇ 'ಪರಮಗುರು' ಎಂದು ಆಚಾರ್ಯ ಕುಂದಕುಂದರು ಹೇಳಿರುತ್ತಾರೆ. ಸಮ್ಯಕ್ತ್ವ ಸಹಿತ ಜ್ಞಾನ, ಚಾರಿತ್ರಗಳಿಂದ ಕೂಡಿದ ಉತ್ಕೃಷ್ಟ ಸ್ಥಾನದಲ್ಲಿರುವ ಆಚಾರ್ಯ, ಉಪಾಧ್ಯಾಯ ಹಾಗೂ ಮುನಿ(ಸಾಧು)ಗಳು ಈ ಮೂವರು ಪರಮೇಷ್ಠಿಗಳು 'ಗುರು'ವಾಗಿರುತ್ತಾರೆ.

ಈ ಪಂಚ ಪರಮೇಷ್ಠಿಗಳನ್ನು ಪ್ರತಿನಿತ್ಯ ಧ್ಯಾನಿಸಲು ಹೇಳಿರುತ್ತಾರೆ. ಅಂತೆಯೇ ಅವರ ಧ್ಯಾನದಿಂದ ಸರ್ವ ಪಾಪ, ದೋಷಗಳು ದೂರವಾಗುತ್ತವೆ ಎಂದು ಜೈನಾಚಾರ್ಯರು ಹೇಳುತ್ತಾರೆ.

ಪ್ರತಿಯೊಂದು ಧರ್ಮದಲ್ಲಿ ಗುರುವಿನ ಮಹತ್ತ್ವ ಸಾರುವ ತಿಥಿ (ದಿನ) ಯನ್ನು ನೆನಪಿಟ್ಟಿಕೊಂಡು ಆ ಕ್ಷಣವನ್ನು ಉಪಕಾರ ಭಾವನೆಯಿಂದ ಸಂಭ್ರಮಿಸುತ್ತಾರೆ. ಅಂತೆಯೇ ಜೈನ ಧರ್ಮಿಯರೂ ಕೂಡ "ಆಷಾಡ ಶುಕ್ಲ ಹುಣ್ಣಿಮೆ"ಯ ದಿನವನ್ನು "ಗುರು ಪೂರ್ಣಿಮೆ" ಯ ದಿನವಾಗಿ ಆಚರಿಸುತ್ತಾರೆ.

ಭಗವಾನ ಮಹಾವೀರ ತೀರ್ಥಂಕರರಿಗೆ "ಕೇವಲಜ್ಞಾನ" (ಸರ್ವಜ್ಞತ್ವ) ಪ್ರಾಪ್ತಿಯಾಗಿ 66 ದಿನಗಳಾದರೂ ಸಮವಸರಣದಲ್ಲಿ ಅವರ ಉಪದೇಶವು ಹೊರಡುವುದಿಲ್ಲ. ಅನೇಕ ಪ್ರಯತ್ನ, ಉಪಾಯಗಳನ್ನು ಮಾಡಿದರೂ, ಮಹಾವೀರರು ಮೌನವಾಗಿಯೇ ಇದ್ದರು. ಕೊನೆಗೆ ದೇವೇಂದ್ರನಿಗೆ ಚಿಂತೆಯಾಗಿ ಸಮವಸರಣದಲ್ಲಿ ಪ್ರಮುಖ ಗಣಧರ (ಗುರು) ಸ್ಥಾನ ಖಾಲಿಯಿದೆ. ಎಲ್ಲಿಯವರೆಗೆ ಆ ಸ್ಥಾನ ಪೂರ್ಣವಾಗುವುದಿಲ್ಲವೋ ಅಲ್ಲಿಯವರೆಗೆ ಹೀಗೆಯೇ ಎಂದು ಅರಿತು ಆತ ಇಂದ್ರಭೂತಿ ಎಂಬ ಮಹಾನ್ ವಿದ್ವಾಂಸನನ್ನು ಕರೆತರಲು ಹೋಗುತ್ತಾನೆ. ಇಂದ್ರಭೂತಿ ಪಂಡಿತನು 500 ಮೇಧಾವಿ ಶಿಷ್ಯರ ಗುರುವಾಗಿರುತ್ತಾನೆ. ಅನೇಕ ವಾದ-ವಿವಾದಗಳನ್ನು ಇಂದ್ರನು ಅವರಲ್ಲಿ ಮಾಡಿ ಕೊನೆಗೆ ಒಂದು ಸಂಶಯವನ್ನು ನಿವಾರಣೆ ಮಾಡಲಾಗದೇ ಆತ ಮಹಾವೀರರ ಬಳಿ ಬರಲು ಒಪ್ಪುತ್ತಾನೆ.

500 ಶಿಷ್ಯರೊಂದಿಗೆ ಸಮವಸರಣ ದ್ವಾರದಲ್ಲಿ ಮಾನಸ್ತಂಭ ನೋಡುತ್ತಲೆ 'ಗರ್ವಭಂಗ'ವಾಗಿ ಮಹಾವೀರರ ಮುಂದೆ ಬಂದು ನಿಲ್ಲಲು, ಆತನ ಅನೇಕ ಸಂಶಯಗಳು ದೂರವಾಗುತ್ತವೆ. ಮಹಾವೀರನನ್ನು ತನ್ನ ಪರಮ ಗುರುವಾಗಿ ಸ್ವೀಕರಿಸಿ "ಗಣಧರ" ಸ್ಥಾನವನ್ನು ಸ್ವೀಕರಿಸುತ್ತಾನೆ. ಅಂತೆಯೇ ಸಮವಸರಣದಲ್ಲಿ ಖಾಲಿಯಿದ್ದ "ಗುರು" ವಿನ ಸ್ಥಳ ತುಂಬಿದೊಡೆ ಮಹಾವೀರರ ದಿವ್ಯ ಉಪದೇಶ (ದಿವ್ಯಧ್ವನಿ) ಆರಂಭವಾಗುತ್ತದೆ. ಈ ಘಟನೆ ನಡೆದ ದಿನವು "ಆಷಾಢ ಶುಕ್ಲ ಪೂರ್ಣಿಮೆ" ಯಾಗಿದ್ದು ಆ ತಿಥಿಯನ್ನು ಗುರುಪೂರ್ಣಿಮೆಯ ದಿನವಾಗಿ ಆಚರಿಸುತ್ತಾರೆ.

ಪ್ರತಿಯೊಬ್ಬರ ಜೀವನದಲ್ಲಿ ಅಜ್ಞಾನವು ಆವರಿಸಿದೆ. ಅದನ್ನು ಗುರುವೇ ನಿವಾರಿಸುವುದು. ಯಾರು ಸರ್ವಜ್ಞರಲ್ಲ ಆದರೆ ಗುರುವಿನ ಮಾರ್ಗದರ್ಶನದಲ್ಲಿ ನಡೆದಾಗಲೇ ದೇವತ್ವ (ಸರ್ವಜ್ಞ) ವು ಪ್ರಾಪ್ತಿಯಾಗುತ್ತದೆ. ನಮ್ಮೆಲ್ಲರ ಜೀವನದಲ್ಲಿ ಒಂದಿಲ್ಲೊಂದು ರೀತಿಯ ಮಾರ್ಗದರ್ಶಕರು ಇದ್ದೇ ಇರುತ್ತಾರೆ. ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಶ್ರೇಷ್ಠ ಗುರುಗಳ ಆಶೀರ್ವಾದವೇ ಕಾರಣವಾಗುತ್ತದೆ ಪರಿಪೂರ್ಣ ಜೀವನ ಹೊಂದಬೇಕೆಂದರೆ ನಮ್ಮೆಲ್ಲರ ಜೀವನದಲ್ಲಿ "ಗುರು"ವನ್ನು ಅಂತರಂಗದಲ್ಲಿ ಪೂಜಿಸುವುದನ್ನು ಅಳವಡಿಸಿಕೊಂಡಾಗಲೇ ಸಾಧ್ಯ.

॥ ನಮೋ ಗುರುಭ್ಯೋಃ ॥

ಮಹಾಮಾತೆ ಶ್ರೀ ಪದ್ಮಾವತಿ ದೇವಿಗೆ ಉಯ್ಯಾಲೆ ಸೇವೆ : ನೂತನ ರಜತ ಉಯ್ಯಾಲೆ ಸಮರ್ಪಣೆ

## "ಭಕ್ತರ ಸಮರ್ಪಣಾ ಭಾವವು ಇಷ್ಟಾರ್ಥಗಳನ್ನು ನೆರವೇರಿಸುವ ಕೃಪೆ ತೋರಲಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ಅತಿಶಯ ಶ್ರೀಕ್ಷೇತ್ರದಲ್ಲಿ ಜೂ. 16ರಂದು ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಜಿನಮಂದಿರದಲ್ಲಿ ನೂತನ ರಜತ ಉಯ್ಯಾಲೆ ಸಮರ್ಪಿಸಲಾಯಿತು. ಭಕ್ತರ ಅಭೀಷ್ಟವರ ಪ್ರದಾಯಿನಿ ಜಗನ್ಮಾತೆ ಶ್ರೀ ಪದ್ಮಾವತಿ ದೇವಿಯವರಿಗೆ ಉಯ್ಯಾಲೆ ಸೇವೆ ಮಾಡಬಯಸುವವರಿಗೆ ದಾನಿ ಬೆಂಗಳೂರಿನ ಶ್ರೀ ಕಿರಣ್ ರಾಜ್ ಕುಟುಂಬದವರಿಂದ ಸುಂದರವಾದ ಕಲಾತ್ಮಕ ಬೆಳ್ಳಿ ಉಯ್ಯಾಲೆಯನ್ನು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಸಾನಿಧ್ಯದಲ್ಲಿ ಅರ್ಪಣೆ ಮಾಡಲಾಯಿತು. ಭಕ್ತರ ಭಕ್ತಿಪೂರ್ವಕ ಸಮರ್ಪಣಾ ಭಾವವು ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸ್ವೀಕರಿಸಿದ ಇಷ್ಟಾರ್ಥಗಳನ್ನು ನೆರವೇರಿಸುವ ಕೃಪೆ ತೋರಲಿ ಎಂದು ಸ್ವಸ್ತಿಶ್ರೀಗಳವರು ಪ್ರಾರ್ಥಿಸಿ ಭಕ್ತರನ್ನು ಆಶೀರ್ವದಿಸಿದರು.



ವರೂರು ನವಗ್ರಹ ತೀರ್ಥಕ್ಷೇತ್ರದಲ್ಲಿ 13-07-2024ರಂದು ಪರಮಪೂಜ್ಯ ಆಚಾರ್ಯ ಗುಣಧರನಂದಿ ಮಹಾರಾಜರ ದಿವ್ಯ ಸಾನಿಧ್ಯದಲ್ಲಿ ಸಕಲ ಭಟ್ಟಾರಕ ಸ್ವಾಮೀಜಿಗಳವರ ಉಪಸ್ಥಿತಿಯಲ್ಲಿ ನಡೆದ ಭಟ್ಟಾರಕ ಸಮ್ಮೇಳನದಲ್ಲಿ "ಅಖಿಲ ಭಾರತ ಭಟ್ಟಾರಕ ಶ್ರೀಮಠಗಳ ಪರಿಷತ್ತು" ನ್ನು ಸ್ಥಾಪಿಸಲಾಯಿತು.

## ಚಾತುರ್ಮಾಸ ಆಚರಣೆ

ಅತಿಶಯ ಶ್ರೀಕ್ಷೇತ್ರ ಹೊಂಬುಜವು ಅತಿ ಪ್ರಾಚೀನ ಹಾಗೂ ಮುನಿಗಳ ತಪಸ್ಸಿನಿಂದ ಪುನೀತವಾಗಿರುವ ಸ್ಥಳ. ಸಾವಿರಾರು ವರ್ಷಗಳ ಇತಿಹಾಸವಿರುವ ಇಲ್ಲಿ ಅನೇಕ ಮಹಾತ್ಮರು ಸಾಧನೆ ಮಾಡಿರುವ ಶಾಸನಗಳಿವೆ. ಕ್ರೋಧಿನಾಮ ಸಂವತ್ಸರದ ಈ ವರ್ಷದ ವರ್ಷಾಯೋಗ-ಚಾತುರ್ಮಾಸ ವ್ರತವನ್ನು ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಪಾವನ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಈ ನಾಲ್ಕು ತಿಂಗಳ ಸಂದರ್ಭದಲ್ಲಿ ಅನೇಕ ವ್ರತ-ನೋಂಪಿ, ಪರ್ವಗಳ ಜೊತೆಗೆ ಧಾರ್ಮಿಕ, ಸಾಂಸ್ಕೃತಿಕ ವಿಶೇಷ ಕಾರ್ಯಕ್ರಮಗಳನ್ನು ಶ್ರೀಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಚಾತುರ್ಮಾಸದ ಅವಧಿಯಲ್ಲಿ ಜುಲೈನಿಂದ ನವೆಂಬರ್‌ವರೆಗೆ ಮುಕುಟ ಸಪ್ತಮಿ, ರಕ್ಷಾ ಬಂಧನ, ಷೋಡಶಕಾರಣ ವ್ರತ, ದಶಲಕ್ಷಣ ಮಹಾಪರ್ವ, ಅನಂತ ಚತುರ್ದಶಿ, ನವರಾತ್ರಿ, ದೀಪಾವಳಿ, ವಿವಿಧ ನೋಂಪಿ ವ್ರತಗಳು ನಡೆಯಲಿವೆ. ಈ ಧರ್ಮ ಪ್ರಭಾವನೆಯ ಕಾರ್ಯದಲ್ಲಿ ಧರ್ಮಬಾಂಧವರು ಭಾಗವಹಿಸಿ ಪುಣ್ಯಾರ್ಜನೆಗಳಿಸಬೇಕೆಂದು ಅಪೇಕ್ಷೆ.

WWW.HOMBUJAPADMAVATI.ORG

### ಮಾನಸ್ಥಂಬೋಪರಿ ಚತುರ್ಮುಖ ಜಿನಬಿಂಬ ಸ್ಥಾಪನೆ ಮತ್ತು ನಾಗದೇವರ ಪ್ರತಿಷ್ಠಾಪನೆ

# "ಮಾನವನ ಅಭಿವೃದ್ಧಿಗೆ ಪರಿಶ್ರಮ ಅಗತ್ಯ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





**ಎಲೆಕ್ಯಾತನಹಳ್ಳಿ :** ಜೈನ ಧರ್ಮದಲ್ಲಿ ಆದಿನಾಥರ ಧರ್ಮ ಕಾರ್ಯದಿಂದ ಸಮಾಜ ಏಳಿಗೆ ಹೊಂದಿದ್ದು ಅವರ ಉಪದೇಶ ಪುರುಷಾರ್ಥ ಪರಿಶ್ರಮದಿಂದ ಮಾನವ ಜನಾಂಗ ಅಭಿವೃದ್ಧಿ ಕಾಣುತ್ತಿದೆ ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ತಿಳಿಸಿದರು.

ತಾಲ್ಲೂಕಿನ ಸೋಂಪುರ ಹೋಬಳಿ ಎಲೆಕ್ಯಾತನಹಳ್ಳಿಯಲ್ಲಿ ದಿನಾಂಕ 29-06-2024 ರಿಂದ 30-06-2024ರವರೆಗೆ ಶ್ರೀ ಆದಿನಾಥ ಸ್ವಾಮಿ ದಿಗಂಬರ ಜೈನ ಬಸದಿ ಅನಂತಮ್ಮ ಟ್ರಸ್ಟ್ ಇವರ ವತಿಯಿಂದ ಶ್ರೀ ಪಾರ್ಶ್ವನಾಥ ಸ್ವಾಮಿಯ ಬಿಂಬ ಸ್ಥಾಪನೆ, ಮಾನಸ್ತಂಭೋಪರಿ ಚತುರ್ಮುಖ ಜಿನಬಿಂಬ ಸ್ಥಾಪನೆ ಹಾಗೂ ನಾಗದೇವರ ಪ್ರತಿಷ್ಠಾಪನೆ ಕಾರ್ಯಕ್ರಮದ ಪಾವನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮಾನವನಿಗೆ ಇಂದು ಅನ್ನ ಆಹಾರಗಳಲ್ಲಿ ವೈಪರಿತ್ಯತೆ ತಲೆ ದೊರತಿದೆ. ಯಾವ ಫಲದಿಂದ ವಸ್ತುಗಳು ಅವರವರ ಏಳಿಗೆಯನ್ನು ಸೃಷ್ಟಿಸಲು ಆದಿನಾಥರು ಹಸಿ, ಕೃಷಿ, ಮಸಿ, ವಿದ್ಯೆ, ಶಿಲ್ಪಕಲೆ ಮತ್ತು ವಾಣಿಜ್ಯದ ವ್ಯವಸ್ಥೆಗಳನ್ನು ಎಲ್ಲಾ ವರ್ಗಗಳಿಗೆ ಸೃಷ್ಟಿಸಿದರು. ಆರು ಪ್ರಕಾರದ ಬದುಕಿನ ಕಲೆಗಳನ್ನು ಕಲಿಸಿದರು. ಯಾವುದೇ ಸಮಸ್ಯೆಯನ್ನು ಹೋಗಲಾಡಿಸಲು ಶಕ್ತಿ-ಯುಕ್ತಿ ಅಗತ್ಯ. ಇದರಿಂದ ಮನುಕುಲ ಉದ್ಧಾರವಾಗಲಿದ್ದು, ಆತ್ಮ ಧರ್ಮ-ಆತ್ಮ-ತತ್ವ ಉದ್ಧಾರವಾಗಲಿದೆ. ಮೋಕ್ಷ ಮಾರ್ಗದಲ್ಲಿ ಸಮವಸರಣವಾಗಲಿದೆ ಎಂದರು.

ನಮ್ಮ ಜೈನ ಧರ್ಮ ಕುಲದ ಉದ್ಧಾರಕ ಶ್ರೀ ಆದಿನಾಥರಾಗಿದ್ದು, ಪರೋಪಕರ ಇವರ ತತ್ವವಾಗಿದ್ದು, ಅನಂತಮ್ಮ ಚಾರಿಟಬಲ್ ಟ್ರಸ್ಟ್ ಇದಕ್ಕೆ ಪೂರಕವಾಗಿದೆ ಎಂದರು.

WWW.HOMBUJAPADMAVATI.ORG

ಜೈನ ಧರ್ಮ ಬದುಕುವ, ವಿಚಾರ ಪದ್ಧತಿಯಾಗಿದ್ದು ಅಹಿಂಸಾ ತತ್ವ ಪಾಲನೆಯಿಂದ ಜೈನ ನಾಗುತ್ತಾನೆ. ಇದಕ್ಕೆ ನಂಬಿಕೆ ಮುಖ್ಯ ಹಾಗೂ ವೀತರಾಗ ಪಾಲನೆ ಅಗತ್ಯ, ಜೈನ ಧರ್ಮದ ಏಳಿಗೆಗೆ ಆಚಾರ್ಯರು ಮುನಿಗಳು ಕೊಡುಗೆ ನೀಡಿದ್ದಾರೆ. ಈ ಬಗ್ಗೆ ಸರಿಯಾದ ಇತಿಹಾಸ ತಿಳಿಯಬೇಕಿದೆ. ಭೂಮಿ ವಿಚಾರಧಾರೆಯ ಮೇಲೆ  ಹಾಗೂ ನಂಬಿಕೆ ಮೇಲೆ ನಡೆಯುತ್ತಿದ್ದು ಒಳ್ಳೆ ನೀತಿ ಇರುವ ಜನರ ಮನಸ್ಸಿನಲ್ಲಿ ಇರುತ್ತಾರೆ. ಪರೋಪಕಾರದ ಜೀವನ ಇಂದು ಅಗತ್ಯವಾಗಿದ್ದು, ಇದು ಜೈನ ಧರ್ಮದ ನೀತಿಯು ಆಗಿದೆ. ಇಂದು ಆತ್ಮ ಸುಖ ಅಗತ್ಯವಾಗಿದ್ದು ನಮ್ಮ ಆಚರಣೆ ಅಹಿಂಸಾ ಶಾಂತಿಯಿಂದ ಕೂಡಿದೆ ಎಂದರು. ಅನಂತಮ್ಮ ಟ್ರಸ್ಟ್‌ನ ಪಿ.ಎಸ್. ಪ್ರಕಾಶ್ ದಂಪತಿಗಳ ಧರ್ಮ ಕಾರ್ಯವನ್ನು ಪ್ರಶಂಶಿಸಿದರು.

ಸಾಮೂಹಿಕ ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀ ಅನಂತಮ್ಮ ಚಾರಿಟಬಲ್ ಟ್ರಸ್ಟ್ ನ ಅಧ್ಯಕ್ಷ ಪಿ. ಎಸ್. ಪ್ರಕಾಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಪುರೋಹಿತ ವರ್ಗ ಹಾಗೂ ಕಠಾರಿ ವಂಶಸ್ಥರಿಂದ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ ಡಾ. ಪಿ.ಎಸ್. ಪ್ರಕಾಶ್ ದಂಪತಿಗಳು, ಕರ್ನಾಟಕ ಜೈನ್ ಅಸೋಸಿಯೇಷನ್ ನಿರ್ದೇಶಕ ರತ್ನಕುಮಾರ್, ಅಜಿತ್ ಪ್ರಸಾದ್ ಕುಟುಂಬ, ಪುರೋಹಿತರು ಇನ್ನಿತರನ್ನ ಸನ್ಮಾನಿಸಲಾಯಿತು. ಸ್ಥಳೀಯ ಶ್ರಾವಕ  ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪ್ರತಿಷ್ಠಾಚಾರ್ಯ ವರ್ಧಮಾನ ಇಂದ್ರ, ಪುರೋಹಿತರಾದ ಆಕಾಶ್ ಜೈನ್ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರು.

ಎಲೆಕ್ಯಾತನಹಳ್ಳಿ ಗ್ರಾಮದ ಪಾಠಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಅನಂತಮ್ಮ ಚಾರಿಟೇಬಲ್ ಟ್ರಸ್ಟ್ ವತಿಯಿಂದ 1ನೇ ತರಗತಿಯಿಂದ 7ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರವನ್ನು ವಿತರಿಸಲಾಯಿತು. ಅಲ್ಲದೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಪೌದನ ಜೈನ ಹಾಗೂ ನಿತ್ಯಶ್ರೀ ಸಂಗಡಿಗರು ಭರತನಾಟ್ಯ ಪ್ರದರ್ಶಿಸಿದರು. ಗೌರವ ಜೈನ್ ಸ್ವಾಗತಿಸಿದರು. ಪ್ರವೀಣ್ ಪಾಲ್ ವಂದಿಸಿದರು. ಎನ್.ಜೆ. ಸತ್ಯೇಂದ್ರ ಕುಮಾರ್ ನಿರೂಪಿಸಿದರು.



**ಜಿನ-ದನಿ**

ಆಢಾಎಜ್ಞಾ ಹು ಮಾಣೋಜ್ಞಾ, ಗುರು-ಪಿದು-ಗುಣೀ ತಹಾ ।
ಸೇವಗಗ್ಗಜ-ಧಮ್ಮಿಟ್ಠಾ, ಎಜ್ಞಾಎ ಸವ್ವ-ಅತ್ಥಿಣೋ ॥46॥

ಅರ್ಥ: ಎಲ್ಲ ವಿದ್ಯಾರ್ಥಿಗಳಿಗೆ ಅಥವಾ ವಿದ್ಯೆಯನ್ನು ಪಡೆಯುವವರಿಗೆ ತಮಗಿಂತ ದೊಡ್ಡವರು, ತಂದೆ-ತಾಯಿ, ಗುರು, ಗುಣವಂತರು, ಸೇವಕ ಹಾಗೂ ಧರ್ಮಾತ್ಮರಿಗೆ ಗೌರವವನ್ನು ಕೊಡಬೇಕು.

## ಬರಲಿರುವ ಪರ್ವದಿನಗಳು

ಕ್ರೋಧಿನಾಮ ಸಂವತ್ಸರದ

ಆಷಾಢಮಾಸ ಶುಕ್ಲಪಕ್ಷ ನವಮಿಯಿಂದ ಶ್ರಾವಣಮಾಸ ಶುಕ್ಲಪಕ್ಷ ಏಕಾದಶಿಯವರೆಗೆ

**ಆಷಾಢ ಮಾಸ:**

- ಜು. 15 ಸೋಮ-ನವಮಿ-ಸ್ವಾತಿ
- ಜು. 16 ಮಂಗಳ-ದಶಮಿ-ವಿಶಾಖ
- ಜು. 17 ಬುಧ-ಏಕಾದಶಿ-ಅನುರಾಧ
- ಜು. 18 ಗುರು-ದ್ವಾದಶಿ-ಜ್ಯೇಷ್ಠ
- ಜು. 19 ಶುಕ್ರ-ತ್ರಯೋದಶಿ-ಮೂಲ
- ಜು. 20 ಶನಿ-ಚತುರ್ದಶಿ-ಪೂ.ಷಾ.
- **ಜು. 21 ಭಾನು-ಹುಣ್ಣಿಮೆ-ಉ.ಷಾ. ಗುರುಪೂರ್ಣಿಮಾ**
- ಜು. 22 ಸೋಮ-ಪ್ರತಿಪದ-ಶ್ರವಣ,
- ಜು. 23 ಮಂಗಳ-ಬಿದಿಗೆ-ಧನಿಷ್ಠ
- ಜು. 24 ಬುಧ-ಚತುರ್ಥಿ-ಶತಭಿಷ
- ಜು. 25 ಗುರು-ಪಂಚಮಿ-ಪೂ.ಭಾ.
- ಜು. 26 ಶುಕ್ರ-ಷಷ್ಠಿ-ಉ.ಭಾ.
- ಜು. 27 ಶನಿ-ಸಪ್ತಮಿ-ರೇವತಿ
- ಜು. 28 ಭಾನು-ಅಷ್ಟಮಿ-ಅಶ್ವಿನಿ
- ಜು. 31 ಬುಧ-ಏಕಾದಶಿ-ರೋಹಿಣಿ
- ಆ. 01 ಗುರು-ದ್ವಾದಶಿ-ಮೃಗಶಿರಾ
- ಆ. 02 ಶುಕ್ರ-ತ್ರಯೋದಶಿ-ಆರಿದ್ರಾ
- ಆ. 03 ಶನಿ-ಚತುರ್ದಶಿ-ಪುನರ್ವಸು
- ಆ. 04 ಭಾನು-ಅಮವಾಸ್ಯೆ-ಪುಷ್ಯ

**ಶ್ರಾವಣ ಮಾಸ:**

- ಆ. 05 ಸೋಮ-ಪ್ರತಿಪದ-ಆಶ್ಲೇಷಾ
- ಆ. 06 ಮಂಗಳ-ಬಿದಿಗೆ-ಮಘಾ
- ಆ. 07 ಬುಧ-ತದಿಗೆ-ಪೂರ್ವಾ
- ಆ. 08 ಗುರು-ಚತುರ್ಥಿ-ಉತ್ತರ
- **ಆ. 09 ಶುಕ್ರ-ಪಂಚಮಿ-ಹಸ್ತ, ಹೊಂಬುಜದಲ್ಲಿ ಮೊದಲನೇ ಶ್ರಾವಣ ಸಂಪತ್ ಶುಕ್ರವಾರ, ನಾಗರಪಂಚಮಿ.**
- ಆ. 10 ಶನಿ-ಷಷ್ಠಿ-ಚಿತ್ತ
- **ಆ. 11 ಭಾನು-ಸಪ್ತಮಿ-ಚಿತ್ತ, ಮುಕುಟ ಸಪ್ತಮಿ, ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಮೋಕ್ಷಕಲ್ಯಾಣ ಪೂಜೆ**
- ಆ. 12 ಸೋಮ-ಸಪ್ತಮಿ-ಸ್ವಾತಿ
- ಆ. 13 ಮಂಗಳ-ಅಷ್ಟಮಿ-ವಿಶಾಖ
- ಆ. 14 ಬುಧ-ನವಮಿ-ಅನುರಾಧ
- ಆ. 15 ಗುರು-ದಶಮಿ-ಜ್ಯೇಷ್ಠ
- **ಆ. 16 ಶುಕ್ರ-ಏಕಾದಶಿ-ಮೂಲ. 2ನೇ ಸಂಪತ್ ಶುಕ್ರವಾರ, ವರಮಹಾಲಕ್ಷ್ಮೀ ವ್ರತ.**

# ಸಾಲಿಗ್ರಾಮ ಜೈನ ಮಿತ್ರಮಂಡಳಿಯ 23ನೇ ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ ಮತ್ತು ಉಪನ್ಯಾಸ ಕಾರ್ಯಕ್ರಮ



**ಬೆಂಗಳೂರು :** ಇಲ್ಲಿಯ ಕನ್ನಡ ಸಾಹಿತ್ಯ ಪರಿಷತ್‌ನ ಕೃಷ್ಣರಾಜ ಸಭಾಂಗಣದಲ್ಲಿ ಸಾಲಿಗ್ರಾಮ ಜೈನ ಮಿತ್ರಮಂಡಳಿಯ 23ನೇ ವಾರ್ಷಿಕೋತ್ಸವ, ಪ್ರಶಸ್ತಿ ಪ್ರಧಾನ ಹಾಗೂ ಉಪನ್ಯಾಸ ಕಾರ್ಯಕ್ರಮವು 07-07-2024ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ರಾಜ್ಯ ಅಲ್ಪಸಂಖ್ಯಾತರ ಇಲಾಖೆ ಕಾರ್ಯದರ್ಶಿ ಮನೋಜ್ ಜೈನ ಸಾಲಿಗ್ರಾಮ ಮಿತ್ರ ಮಂಡಳಿ ಮಾಡುತ್ತಿರುವ ಕಾರ್ಯಕ್ರಮಗಳನ್ನು ಶ್ಲಾಘಿಸಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸವಲತ್ತುಗಳನ್ನು ಪಡೆದುಕೊಳ್ಳುವಂತೆ ಕರೆ ನೀಡಿದರು. ಮಿತ್ರಮಂಡಳಿಯ ಅಧ್ಯಕ್ಷರಾದ ಡಾ. ನೀರಜಾ ನಾಗೇಂದ್ರಕುಮಾರ್‌ರವರು ಸ್ವಾಗತಿಸಿ ಪ್ರಸ್ತಾವಿಕ ನುಡಿಗಳನ್ನಾಡಿದರು. ಲೇಖಕ ಪ್ರೋಫೆಸರ್ ಕೆ.ಇ. ರಾಧಾಕೃಷ್ಣ ಮಹಾಪುರಾಣ ಕುರಿತು ಉಪನ್ಯಾಸ ನೀಡಿ, ತಾವು ಅದನ್ನು ಇಂಗ್ಲಿಷ್‌ಗೆ ಅನುವಾದಿಸುವಾಗ ಆದ ಅನುಭವಗಳ ಬಗ್ಗೆ ತಿಳಿಸಿದರು.

ಸುಮೇರು ಜೈನ್ ಫೌಂಡೇಶನ್ ಸ್ಥಾಪಕ ಅಧ್ಯಕ್ಷರಾದ ಡಾ. ಎಸ್.ಪಿ. ಸುಜಾತರವರಿಗೆ "ಸುಮ ವಸಂತ" ಪ್ರಶಸ್ತಿ ಹಾಗೂ "ಶ್ರೇಯೋಭದ್ರ" ಪ್ರಶಸ್ತಿಯನ್ನು ಬೆಂಗಳೂರು ಜೈನ ವಧು ವರರ ವೇದಿಕೆಗೆ ನೀಡಲಾಯಿತು. ಪ್ರಶಸ್ತಿಯನ್ನು ಕಾರ್ಯದರ್ಶಿಗಳಾದ ರಾಜಕೀರ್ತಿ ಸ್ವೀಕರಿಸಿದರು. ಈ ಸಾಲಿನ ಸುವರ್ಣ ಕನ್ನಡ ಪ್ರಶಸ್ತಿಯನ್ನು ಪ್ರಶಸ್ತಿ ಪುರಸ್ಕೃತರಾದ ಪಿ.ವೈ. ರಾಜೇಂದ್ರ ಕುಮಾರ್ ಹಾಗೂ ಅಂತರಾಷ್ಟ್ರೀಯ ಆಟೋಮೆಟಿವ್ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಪದ್ಮಿನಿ ನವಲಗುಂದ ಅವರನ್ನು ಸನ್ಮಾನಿಸಲಾಯಿತು.

ಭಾರತೀಯ ಜೈನ್‌ಮಿಲನ್ ರಾಷ್ಟ್ರೀಯ ಕಾರ್ಯಧ್ಯಕ್ಷ ಧರ್ಮಸ್ಥಳ ಸುರೇಂದ್ರ ಕುಮಾರ್, ಶ್ರೀಮತಿ ಅನಿತಾ ಸುರೇಂದ್ರ ಕುಮಾರ, ಡಾ. ಪದ್ಮಿನಿ ನಾಗರಾಜ್, ಡಾ. ಸತೀಶ್, ಸಾಹಿತಿ ಎಂ.ಎ. ಜಯಚಂದ್ರ ಇನ್ನಿತರರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ದಾನಿಗಳನ್ನು ಸನ್ಮಾನಿಸಲಾಯಿತು. ಧೀರಜ್ ಜೈನ ನಿರೂಪಿಸಿದರು. ರತ್ನ ಮಹೇಂದ್ರ ಕುಮಾರ್ ಪ್ರಾರ್ಥಿಸಿದರು. ಸುಂದರ್ ರಾಜ್ ವಂದಿಸಿದರು. ಎಸ್.ಎ. ಅಶೋಕ್ ಕುಮಾರ್ ಸ್ಕಾಲರ್ಶಿಪ್ ದಾಖಲೆಗಳನ್ನು ವಾಚಿಸಿದರು.

## ಹಿರಿಯ ಸಾಹಿತಿ ನಾಡೋಜ ಪ್ರೊ. ಕಮಲಾ ಹಂಪನ ನಿಧನ



**ಬೆಂಗಳೂರು :** ಖ್ಯಾತ ಕನ್ನಡದ ಹಿರಿಯ ಸಾಹಿತಿ, ಲೇಖಕಿಯಾದ ಡಾ. ಕಮಲಾ ಹಂಪನರವರು ಜೂ. 22ರಂದು ಸ್ವರ್ಗಸ್ಥರಾದರು. ಕನ್ನಡ ಸಾರಸ್ವತ ಲೋಕಕ್ಕೆ ಇವರು ಸಲ್ಲಿಸಿರುವ ಸೇವೆ ಅನನ್ಯ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ತಮ್ಮನ್ನು ತೊಡಗಿಸಿಕೊಂಡು ವಿಭಿನ್ನತೆಯನ್ನು ಮೆರೆದವರು. ಡಾ. ಹಂಪ ನಾಗರಾಜಯ್ಯರವರ ಶ್ರೀಮತಿಯಾಗಿ ಸಂಸಾರದ ಹೊಣೆಯೊಂದಿಗೆ ಬರವಣಿಗೆಯನ್ನು ಮುಂದುವರೆಸಿಕೊಂಡು ಬಂದ ಆದರ್ಶ ಮಹಿಳೆ. ನಡೆದಾಡುವ ಸರಸ್ವತಿಯಾಗಿದ್ದ ಇವರು ಮಾನವೀಯ ಮೌಲ್ಯಗಳನ್ನು ಸಮಾಜದಲ್ಲಿ ವೃದ್ಧಿಸುವಂತೆ ಸದಾಕಾಲ ಪ್ರಯತ್ನಿಸುತ್ತಿದ್ದರು. ಜೈನ ಸಾಹಿತ್ಯದ ವಿವಿಧ ಆಯಾಮಗಳನ್ನು ಅರಿತು, ಸಂಶೋಧಿಸಿ ವಿಶಿಷ್ಠ ಸೇವೆಯನ್ನು ಸಲ್ಲಿಸಿ 60 ವರ್ಷಗಳ ಕಾಲ ತಮ್ಮ ಅಧ್ಯಯನ, ಅಧ್ಯಾಪನ, ಲೇಖನ, ಸಂಶೋಧನೆಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಅವಿರತವಾಗಿ ಕೃಷಿ ಮಾಡಿದ್ದಾರೆ. ಇವರ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿಗಳು ಸಂದಿವೆ. ಬಾಲ್ಯದಿಂದಲೂ ಹೊಂಬುಜದ ಅನನ್ಯ ಭಕ್ತರಾಗಿದ್ದ ಇವರು ಇಲ್ಲಿಯ ಇತಿಹಾಸ, ಸಂಶೋಧನೆಗೆ ಪತಿಯೊಂದಿಗೆ ಶ್ರಮಿಸುತ್ತಿದ್ದರು. ಶ್ರೀ ಸಿದ್ಧಾಂತಕೀರ್ತಿ ಗ್ರಂಥಮಾಲೆಯಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. 2013ರಲ್ಲಿ 'ಸಿದ್ಧಾಂತ ಕೀರ್ತಿ' ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಭ॥ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಮೃತರ ಆತ್ಮಕ್ಕೆ ಶಾಂತಿ ನೀಡಲೆಂದು, ಕುಟುಂಬಸ್ಥರಿಗೆ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿ ಕರುಣಿಸಲೆಂದು ಪ್ರಾರ್ಥಿಸಿದ್ದಾರೆ.

## ಶ್ರೀ ರಾವಸಾಹೇಬ ಪಾಟೀಲ ನಿಧನ



**ಬೋರ್‌ಗಾಂವ :** ಸಹಕಾರಿ ರತ್ನ, ಅರಿಹಂತ ಉದ್ಯೋಗ ಸಮೂಹ ಸಂಸ್ಥಾಪಕ, ದಕ್ಷಿಣ ಭಾರತ ಜೈನ ಸಭಾದ ಅಧ್ಯಕ್ಷರಾದ ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ ಇವರು ಜೂ. 25ರಂದು ಸ್ವರ್ಗಸ್ಥರಾದರು. ದಕ್ಷಿಣ ಭಾರತ ಜೈನ ಸಭೆಯ ಮೂರು ಅವಧಿಗೆ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ಆ ಸಂಸ್ಥೆಗೆ ಹೆಚ್ಚಿನ ಘನತೆಯನ್ನು ತಂದು ಕೊಟ್ಟು ಸಂಸ್ಥೆಯು ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಾಗುವಲ್ಲಿ ಶ್ರೀ ರಾವಸಾಹೇಬರ ಕೊಡುಗೆ ಅಪಾರ. ಬೋರಗಾಂವದಂತಹ ಕರ್ನಾಟಕ ರಾಜ್ಯದ ಮಹಾರಾಷ್ಟ್ರ ಸೀಮೆಯ ಗ್ರಾಮದಲ್ಲಿ ಹುಟ್ಟಿ ಬೆಳೆದರೂ ಅನೇಕ ಸಹಕಾರ ಸಂಸ್ಥೆಗಳನ್ನು ಮತ್ತು ಉದ್ಯೋಗ ಸಮೂಹಗಳನ್ನು ಹುಟ್ಟುಹಾಕಿ, ಯಶಸ್ಸಿನ ಹಾದಿಯಲ್ಲಿ ಮುನ್ನಡಿಸಿ ತಮ್ಮ ಸಂಘಟನಾ ಚಾತುರ್ಯವನ್ನು ತೋರಿಸಿಕೊಟ್ಟಿದ್ದಲ್ಲದೇ ತಾವೊಬ್ಬ ಹುಟ್ಟು ನಾಯಕನೆಂಬುದನ್ನು ಸಾಧಿಸಿತೋರಿಸಿದ್ದರು. ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಲಿ. ಅರಿಹಂತ ಜವಳಿ ಗಿರಣಿ, ಅರಿಹಂತ ಗಾರ್ಮೆಂಟ್ಸ್, ಓಂ ಶುಗರ್ಸ್ ಲಿ. ಸಂಸ್ಥೆಗಳಲ್ಲಿ ಸಾವಿರಾರು ಕೈಗಳಿಗೆ ಕೆಲಸನೀಡಿ ತಾವೊಬ್ಬ ಪ್ರಗತಿಮುಖಿ ಎಂದು ಸಾಧಿಸಿ ತೋರಿಸಿದ್ದಾರೆ. ಶ್ರೀಕ್ಷೇತ್ರದ ನಿರಂತರ ಸೇವೆಗಳಲ್ಲಿ ಭಾಗವಹಿಸುತ್ತಿದ್ದರು. ಶ್ರಾವಣ ಮಾಸದ ಶುಕ್ರವಾರದಂದು ಪೂಜೆ ಮತ್ತು ಭೋಜನ ಸೇವಾಕರ್ತರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದರು. ಭ. ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಮೃತರ ಆತ್ಮಕ್ಕೆ ಶಾಂತಿ ನೀಡಲೆಂದು, ಕುಟುಂಬಸ್ಥರಿಗೆ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿ ಕರುಣಿಸಲೆಂದು ಪೂಜ್ಯಶ್ರೀಗಳವರು ಪ್ರಾರ್ಥಿಸಿದ್ದಾರೆ.

WWW.HOMBUJAPADMAVATI.ORG

## ಶ್ರೀ ಅಜಿತ ಅಣ್ಣಾರಾಯ ಮಿರ್ಜಿ ನಿಧನ



**ಶೇಡಬಾಳ :** ಕನ್ನಡದ ಖ್ಯಾತ ಸಾಹಿತಿಗಳಾದ ಮಿರ್ಜಿ ಅಣ್ಣಾರಾಯರ ಸುಪುತ್ರರಾದ ಶ್ರೀ ಅಜಿತ ಅಣ್ಣಾರಾಯ ಮಿರ್ಜಿಯವರು ದಿನಾಂಕ 28-6-24ರಂದು ಸ್ವರ್ಗಸ್ಥರಾದರು. ಚಿಕ್ಕಂದಿನಲ್ಲಿಯೇ ಬಾಲ ಸಾಹಿತಿಯಾಗಿ ಗುರುತಿಸಿಕೊಂಡಿದ್ದ ಇವರು ತಮ್ಮ ತಂದೆಯಂತೆಯೇ ಸಾಹಿತ್ಯ ಮತ್ತು ಪ್ರಕಾಶನ ಕಾರ್ಯದಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ತಮ್ಮ ತಂದೆಯವರಿಂದ ಸ್ಥಾಪಿಸಲ್ಪಟ್ಟ ಶಾಂತಿ ಸೇವಾ ಸದನ ಎಂಬ ಪ್ರಕಾಶನ ಸಂಸ್ಥೆಯ ವತಿಯಿಂದ ಜೈನ ಸಾಹಿತ್ಯಕ್ಕೆ ಸಂಬಂಧಪಟ್ಟ ಅನೇಕ ಹೊಸ ಗ್ರಂಥಗಳ ಮುದ್ರಣ, ಮರುಮುದ್ರಣ ಕಾರ್ಯವನ್ನು ಶ್ರದ್ಧೆಯಿಂದ ಮಾಡಿರುತ್ತಾರೆ. ಜಿನ ಸಾಹಿತ್ಯ ಸೇವೆಯ ಜೊತೆಗೆ ಪತ್ರಿಕಾ ಪ್ರಪಂಚದಲ್ಲಿಯೂ ತಮ್ಮನ್ನು ಗುರುತಿಸಿಕೊಂಡಿದ್ದ ಇವರು ನಾಂದಿನಿ ಮಠದ ಶ್ರೀಗಳ ಪ್ರೇರಣೆಯಂತೆ ಮುಖ ಪತ್ರಿಕೆಯಾಗಿ ಕನ್ನಡ ಭಾಷೆಯ 'ಸಾರ್ವಧರ್ಮ' ಎಂಬ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದ್ದರು ಭ॥ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಮೃತರ ಆತ್ಮಕ್ಕೆ ಶಾಂತಿ ನೀಡಲೆಂದು, ಕುಟುಂಬಸ್ಥರಿಗೆ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸಿದ್ದಾರೆ.

## 29ನೇ ವಾರ್ಷಿಕ ಪೂಜಾ ಮಹೋತ್ಸವ

**ಬೆಂಗಳೂರು :** ಇಲ್ಲಿಯ ಪುಣ್ಯಸ್ಥಾನ ಪುಟ್ಟೇನಹಳ್ಳಿಯಲ್ಲಿ ದಿನಾಂಕ 28-07-2024ರ ಭಾನುವಾರದಂದು ಭಗವಾನ ಶ್ರೀ 1008 ಶೀತಲನಾಥ ತೀರ್ಥಂಕರರ 29ನೇ ವಾರ್ಷಿಕ ಪೂಜಾ ಮಹೋತ್ಸವವು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಪಾವನ ಸಾನಿಧ್ಯ ಹಾಗೂ ಮಾರ್ಗದರ್ಶನದಲ್ಲಿ ನೆರವೇರಿಸಲಾಗುವುದು. ಅಂದು ಬೆಳಿಗ್ಗೆ ಅಗ್ರೋಧಕ ಮೆರವಣಿಗೆ, ನಿತ್ಯಪೂಜೆ, ಜಿನಗುಣ ಸಂಪತ್ತಿ ಆರಾಧನೆ, ಭಗವಾನ ಶ್ರೀ 1008 ಶೀತಲನಾಥ ತೀರ್ಥಂಕರರಿಗೆ 108 ಕಳಸಗಳ ಮಹಾಭಿಷೇಕ, ಪಂಚಾಮೃತ ಅಭಿಷೇಕ ಮತ್ತು ಮಂಗಳಾರತಿ, ಮಧ್ಯಾಹ್ನ ಪ್ರತಿಭಾ ಪುರಸ್ಕಾರ ವಿತರಣೆ ಪೂಜ್ಯ ಸ್ವಾಮೀಜಿಯವರ ಆಶೀರ್ವಚನ ಹಾಗೂ ಪಾದಪೂಜೆ ಕಾರ್ಯಕ್ರಮಗಳು ನೆರವೇರಲಿದೆ. ಈ ಎಲ್ಲಾ ಪೂಜಾ ಕಾರ್ಯಕ್ರಮದಲ್ಲಿ ಧರ್ಮ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿಬೇಕಾಗಿ ವಿನಂತಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೋ: 8217595676, 9341224133 ಸಂಪರ್ಕಿಸಲು ಕೋರಿದೆ.

## ಪ್ರತಿಭಾ ಪುರಸ್ಕಾರ ಹಾಗೂ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಬೆಂಗಳೂರು:** ಪ್ರತಿ ವರ್ಷದಂತೆ ಈ ವರ್ಷವೂ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 97 ಮತ್ತು ಅದಕ್ಕಿಂತಲೂ ಹೆಚ್ಚು ಅಂಕ ಗಳಿಸಿರುವ, ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇ. 95 ಮತ್ತು ಅದಕ್ಕಿಂತಲೂ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲು ಹಾಗೂ ಬುದ್ಧಿಮಾಂದ್ಯ, ಅಂಗವಿಕಲ ಹೆಣ್ಣುಮಕ್ಕಳಿಗೆ ಸಹಾಯಧನ ನೀಡಲು ಸ್ವ-ಬರಹ ಅರ್ಜಿಯನ್ನು ಆಹ್ವಾನಿಸಿ, ಪಂಡಿತರತ್ನ ಎ. ಶಾಂತರಾಜಶಾಸ್ತ್ರಿ ಟ್ರಸ್ಟ್, 369, 42ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು-560070 ಈ ವಿಳಾಸಕ್ಕೆ ಕಳುಹಿಸಿಕೊಡಲು ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿಭಾ ಪುರಸ್ಕಾರಕ್ಕಾಗಿ ವಿದ್ಯಾರ್ಥಿಯ ಹೆಸರು, ವಿಳಾಸ, ಜಾತಿ ಪ್ರಮಾಣ ಪತ್ರ, ಉತ್ತೀರ್ಣರಾದ ಕೋರ್ಸ್, ಗಳಿಸಿದ ಶೇಕಡಾ ಅಂಕ ಹಾಗೂ ಒಟ್ಟು ಅಂಕ, ವಿದ್ಯಾರ್ಥಿಯ ಪಾಸ್‌ಬುಕ್ ವಿವರ ಈ ವಿವರಗಳನ್ನೊಂಡ ಅರ್ಜಿಗಳನ್ನು ಅಂಕಪಟ್ಟಿ ಮತ್ತು ಜಾತಿ ಪ್ರಮಾಣ ಪತ್ರಗಳ ಪ್ರತಿಗಳನ್ನು ಲಗತ್ತಿಸಿ ವಾಟ್ಸಪ್-ಮೊಬೈಲ್ ಸಂಖ್ಯೆ ತಪ್ಪದೇ ನಮೂದಿಸಿ 10-08-2024ರ ಒಳಗೆ ಕಳುಹಿಸಬೇಕು.

ಅಂಗವಿಕಲ ಹೆಣ್ಣುಮಕ್ಕಳಿಗೆ ಸಹಾಯಧನಕ್ಕಾಗಿ: ಶೇಕಡ 50 ಮತ್ತು ಅದಕ್ಕಿಂತಲೂ ಹೆಚ್ಚು ಬುದ್ಧಿಮಾಂದ್ಯ/ ಅಂಗವಿಕಲ/ ದೃಷ್ಟಿಮಾಂದ್ಯತೆ ಇರುವ ಹೆಣ್ಣುಮಕ್ಕಳು/ಅವರ ಪೋಷಕರು ಹೆಣ್ಣು ಮಗಳ ಹೆಸರು, ವಿಳಾಸ ಮತ್ತು ಫೋಟೋ, ಜಾತಿ ಪ್ರಮಾಣ ಪತ್ರ, ಬುದ್ಧಿಮಾಂದ್ಯತೆ/ಅಂಗವಿಕಲತೆ/ ದೃಷ್ಟಿದೋಷ ಈ ಕುರಿತ ವಿವರ (ಶೇಕಡ ದೋಷ ಸೇರಿದಂತೆ) ಸರಕಾರಿ ವೈದ್ಯರ ಪ್ರಮಾಣಪತ್ರದ ಪ್ರತಿ ಲಗತ್ತಿಸಿ, ದೋಷವುಳ್ಳ ಹೆಣ್ಣುಮಗಳ ಬ್ಯಾಂಕ್ ಖಾತೆ ವಿವರ (ಕ್ಯಾನ್ಸಲ್ ಮಾಡಿದ ಚೆಕ್ ಪ್ರತಿ/ಪಾಸ್ ಬುಕ್‌ನ ಮೊದಲ ಪುಟದ ಜೆರಾಕ್ಸ್ ಪ್ರತಿ) ವಾಟ್ಸಪ್/ಮೊಬೈಲ್ ಸಂಖ್ಯೆ ತಪ್ಪದೇ ನಮೂದಿಸಿ ಅರ್ಜಿಯನ್ನು 01-08-2024ರ ಒಳಗಾಗಿ ಕಳುಹಿಸಲು ಟ್ರಸ್ಟ್ ಪರವಾಗಿ ಮ್ಯಾನೇಜಿಂಗ್ ಟ್ರಸ್ಟಿ ನೇಮಚಂದ್ರ ಡಿ. ರವರು ತಿಳಿಸಿದ್ದಾರೆ.

## ಸೋಣ ಶುಕ್ರವಾರದ ವಿಶೇಷ ಪೂಜೆಗಳು

ಶ್ರೀಕ್ಷೇತ್ರ ಹೊಂಬುಜ ಮಹಾಸಂಸ್ಥಾನದ ಶಾಖಾ ಕ್ಷೇತ್ರಗಳಾದ ವರಂಗ ಮತ್ತು ಹಟ್ಟಿಯಂಗಡಿಯಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸೋಣ ಶುಕ್ರವಾರದ ಪೂಜೆಗಳು ದಿನಾಂಕ **23-08-2024, 30-08-2024, 06-09-2024, 13-09-2024** ರಂದು ನೆರವೇರಲಿವೆ.

ಸಂಪರ್ಕ- ಶ್ರೀ ವರಂಗ ಜೈನ ಮಠ : **9845548688**, ಶ್ರೀ ಹಟ್ಟಿಯಂಗಡಿ ಜೈನ ಮಠ : **9448869955**

## ಅಭಿಮತ

ಸಫಲತೆ ಎನ್ನುವುದು ಒಂದೇ ಪ್ರಯತ್ನದಲ್ಲಿ ಅಥವಾ ಅದೃಷ್ಟಕ್ಕೆ ಸಿಗುವಂತಹದ್ದು ಅಲ್ಲ. ಮನುಷ್ಯನು ತನ್ನ ಪ್ರಯತ್ನದ ಮೇಲೆ ವಿಶ್ವಾಸವಿಟ್ಟು ಪರಿಶ್ರಮ ಪಟ್ಟರೆ ಫಲ ನಿಶ್ಚಿತ ಎಂದು ಪೂಜ್ಯರು ಹಿಂದಿನ ಸಂಚಿಕೆಯ ಆಶೀರ್ವಚನದಲ್ಲಿ ಚೆನ್ನಾಗಿ ತಿಳಿಸಿದ್ದಾರೆ. ಆಧ್ಯಾತ್ಮಿಕ ಜ್ಞಾನಪ್ರಭೆ ಜೀವನ ಮೌಲ್ಯಗಳನ್ನು ಸಂವರ್ಧಿಸಲಿ ಎಂದು ಹೇಳಿರುವುದು, ಪ್ರತಿಭಾ ಪುರಸ್ಕಾರ ಕೊಡುವುದು ಹೆಮ್ಮೆಯ ಮಾತಾಗಿದೆ. ಮುನಿ ಪರಂಪರೆ ಕಾಪಾಡುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ಸರ್ವರೂ ಕ್ಷೇಮಾಭ್ಯುದಯದ ಧಾರ್ಮಿಕ ಪ್ರಜ್ಞಾವಂತರಾಗಬೇಕು ಎಂದು ಪೂಜ್ಯ ಸ್ವಾಮೀಜಿಯವರ ಜನ್ಮ ದಿನದ ಸಂದೇಶ ನೀಡಿರುವರು. ಆಧ್ಯಾತ್ಮಿಕತೆಯೊಳಗೊಂಡ ಗುರುದೇವ ಪತ್ರಿಕೆಗೆ ಧನ್ಯವಾದಗಳು.

– ಎಸ್. ಗೀತಾಮಾಯಿ
ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ,
ಬೆಂಗಳೂರು.

## ಗೌರವ ಸಮರ್ಪಣೆ



**ಅರಿಹಂತಗಿರಿ :** ದಿನಾಂಕ 10-07-2024 ರಂದು ತಮಿಳುನಾಡಿನ ರಾಜ್ಯಪಾಲರಾದ ಶ್ರೀ ಆರ್.ಎನ್. ರವಿ ಅವರು ಶ್ರೀ ಕ್ಷೇತ್ರ ಅರಿಹಂತಗಿರಿ ದಿಗಂಬರ ಜೈನ ಮಠಕ್ಕೆ ಭೇಟಿ ನೀಡಿ ದರ್ಶನ ಪಡೆದು ಅವರ ಅಮೃತ ಹಸ್ತದಿಂದ ಪರಮಪೂಜ್ಯ ಸ್ವಸ್ತಿಶ್ರೀ ಧವಲಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರಿಗೆ ಶ್ರೀ ಭಾರತವರ್ಷಿಯ ದಿಗಂಬರ ಜೈನ ಮಹಿಳಾ ಮಹಾಸಭಾ ಇವರ ವತಿಯಿಂದ "ಸರ್ವ ಜಿನಾಲಯ ಸಂರಕ್ಷಣ ಚಕ್ರವರ್ತಿ" ಎಂಬ ಬಿರುದನ್ನು ನೀಡಿ ಗೌರವಿಸಲಾಯಿತು.

ಗುರುದೇವ ಪತ್ರಿಕೆಗೆ
ಚಂದಾದಾರರಾಗಿರಿ



# ಅತಿಶಯ ಶ್ರೀಕ್ಷೇತ್ರ ಹೊಂಬುಜ



॥ ಭಗವಾನ್ ಶ್ರೀ ಪಾರ್ಶ್ವನಾಥಾಯ ನಮಃ ॥

ಹುಂಚ, ಹೊಸನಗರ ತಾಲ್ಲೂಕು-577436

॥ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ನಮಃ ॥

## ಶ್ರಾವಣ ಮಾಸದ 'ಸಂಪತ್ ಶುಕ್ರವಾರ' ಪೂಜಾ ಕಾರ್ಯಕ್ರಮ



ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಮತ್ತು ಮಹಾಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿದಿಯಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಶ್ರಾವಣ ಸಂಪತ್ ಶುಕ್ರವಾರ ಪೂಜಾ ಮಹೋತ್ಸವಗಳು ಜರುಗಲಿರುವುದು. ಸದ್ಧರ್ಮ ಭಕ್ತವೃಂದದವರು ಶ್ರೀಕ್ಷೇತ್ರಕ್ಕೆ ಆಗಮಿಸಿ ಪೂಜಾ ವಿಧಿ-ವಿಧಾನಗಳಲ್ಲಿ ಪಾಲ್ಗೊಂಡು ತಮ್ಮ ಭಕ್ತಿ ಪೂರ್ವಕ ಪೂಜೆಯನ್ನು ಸಮರ್ಪಿಸಿ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ, ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕೆಂದು ಅಪೇಕ್ಷಿಸಲಾಗಿದೆ.

### 'ಸಂಪತ್ ಶುಕ್ರವಾರ'

| | |
|---|---|
| 09-08-2024, ಶುಕ್ರವಾರ | ಮೊದಲನೇ ಸಂಪತ್ ಶುಕ್ರವಾರ |
| 11-08-2024, ಭಾನುವಾರ | ಮುಕುಟ ಸಪ್ತಮಿ |
| 16-08-2024, ಶುಕ್ರವಾರ | 2ನೇ ಸಂಪತ್ ಶುಕ್ರವಾರ, ವರಮಹಾಲಕ್ಷ್ಮೀ ವ್ರತ |
| 19-08-2024, ಸೋಮವಾರ | ಉಪಾಕರ್ಮ (ಯಜ್ಞೋಪವೀತಧಾರಣೆ) |
| 23-08-2024, ಶುಕ್ರವಾರ | 3ನೇ ಸಂಪತ್ ಶುಕ್ರವಾರ |
| 30-08-2023, ಶುಕ್ರವಾರ | 4ನೇ ಸಂಪತ್ ಶುಕ್ರವಾರ |

### ಸೋಣ ಶುಕ್ರವಾರ

| | |
|---|---|
| 23-08-2024 | ಮೊದಲನೇ ಸೋಣ ಶುಕ್ರವಾರ |
| 30-08-2024 | ಎರಡನೇ ಸೋಣ ಶುಕ್ರವಾರ |
| 06-09-2024 | ಮೂರನೇ ಸೋಣ ಶುಕ್ರವಾರ |
| 13-09-2024 | ನಾಲ್ಕನೇ ಸೋಣ ಶುಕ್ರವಾರ |

WWW.HOMBUJAPADMAVATI.ORG

ಭೋಜನ ವ್ಯವಸ್ಥೆಗೆ ಅಕ್ಕಿ, ಸಕ್ಕರೆ, ಧಾನ್ಯ ಇತ್ಯಾದಿಗಳನ್ನು ದಾನವಾಗಿ ಸ್ವೀಕರಿಸಲಾಗುತ್ತದೆ.

ವಿ.ಸೂ. ಭಕ್ತದಿಗಳು ತಮ್ಮ ಕಾಣಿಕೆಯನ್ನು ಎಂ.ಓ./ಬ್ಯಾಂಕ್ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಿಕೊಡಬಹುದು.

KARNATAKA BANK

SCAN QR CODE TO PAY

NEFT/RTGS ಮೂಲಕ ಕಾಣಿಕೆ ಸಂದಾಯಕ್ಕಾಗಿ:
Sri Hombuja Jain Math
S.B.A/c No: 3182500101025001 With Karnataka Bank, Humcha Br.
IFSC Code: KARB0000318.

ಶ್ರೀಹೊಂಬುಜ ಜೈನ ಮಠ, ಅಂಚೆ: ಹುಂಚ-577436, ಹೊಸನಗರ ತಾ॥ ಶಿವಮೊಗ್ಗ ಜಿಲ್ಲೆ.
ಮೊ: 08185-262722, 9481453653, 9483801460

**ಸರ್ವರಿಗೂ ಆತ್ಮೀಯ ಸುಸ್ವಾಗತ**

ಆಡಳಿತಾಧಿಕಾರಿಗಳು,
ಶ್ರೀ ಹೊಂಬುಜ ಜೈನ ಮಠ, ಹುಂಚ

Face book page
www.facebook.com/hombujapadmavathi
E-mail: shrihombuja@gmail.com
website : www.hombujapadmavathi.org



॥ ಭಗವಾನ್ ಶ್ರೀ ಪಾರ್ಶ್ವನಾಥಾಯ ನಮಃ ॥



ಶ್ರೀ ಪದ್ಮಾವತ್ಯೈ ನಮಃ ॥

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರದಲ್ಲಿ ಭಕ್ತಾದಿಗಳು ಸಲ್ಲಿಸುವ

## ಹರಕೆ, ಪೂಜೆ ಮತ್ತು ಕಾಣಿಕೆ ಪಟ್ಟಿಯ ವಿವರ

| | | | | | |
|---|---|---|---|---|---|
| 1 | ಶ್ರೀ ಪಾರ್ಶ್ವನಾಥಸ್ವಾಮಿಗೆ ಪಂಚಾಮೃತ ಅಭಿಷೇಕ | 150/- | 23 | ಕುಂಕುಮ ಅರ್ಚನೆ | 150/- |
| 2 | ಶ್ರೀ ನೇಮೀಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ | 150/- | 24 | ಜಟ್ಟಿಂಗರಾಯನ ಪಂಚಕಜ್ಜಾಯ ಪೂಜೆ | 200/- |
| 3 | ಶ್ರೀ ಪದ್ಮಾವತೀ ಅಮ್ಮನವರಿಗೆ ಪಂಚಾಮೃತ ಅಭಿಷೇಕ | 150/- | 25 | ಜಟ್ಟಿಂಗರಾಯನ ವಿಶೇಷ ಅಲಂಕಾರ | 500/- |
| 4 | ಶ್ರೀ ಸರಸ್ವತೀ ದೇವಿ ಅಮ್ಮನವರಿಗೆ ವಿಶೇಷ ಪೂಜೆ | 200/- | 26 | ಹೆಜ್ಜೆ ನಮಸ್ಕಾರ | 100/- |
| 5 | ಕ್ಷೀರಾಭಿಷೇಕ | 100/- | 27 | ನಾಮಕರಣ | 3000/- |
| 6 | ಮಹಾನೈವೇದ್ಯ ಪೂಜೆ | 500/- | 28 | ಕರ್ಣವೇದನ | 100/- |
| 7 | ವರಹ ಪೂಜೆ | 200/- | 29 | ತ್ಯಾಗಿಗಳಿಗೆ ಆಹಾರ ನಿಧಿ | 1000/- |
| 8 | ಪಂಚಕಜ್ಜಾಯ ಪೂಜೆ | 100/- | 30 | ಅಕ್ಷರಾಭ್ಯಾಸ ಪ್ರಾರಂಭ | 500/- |
| 9 | ಪ್ರತ್ಯೇಕ ಪ್ರಸಾದ ಕಾಣಿಕೆ | 200/- | 31 | ಹಣ್ಣು ಕಾಯಿ ಪೂಜೆ | 100/- |
| 10 | ಉಡಿ ಪೂಜೆ | 200/- | 32 | ಲಗ್ನ ಕಾಣಿಕೆ | 5000/- |
| 11 | ಸೀರೆ & ಉಡಿ ಪೂಜೆ | | 33 | ಅನ್ನ ಪ್ರಾಶನ | 250/- |
| 12 | ಶ್ರೀ ಸ್ವಾಮಿ ಸಹಸ್ರನಾಮ ಪೂಜೆ | 1000/- | 34 | ಹಣ್ಣು ಕಾಯಿ | 10/- |
| 13 | ಶ್ರೀ ಪದ್ಮಾವತೀ ಸಹಸ್ರನಾಮ ಪೂಜೆ | 1000/- | 35 | ವಾಹನ ಪೂಜೆ | 200/- |
| 14 | ನವ ಕಲಶಾಭಿಷೇಕ | 500/- | 36 | ಸಿಹಿ ತಿಂಡಿ ಪ್ರಸಾದ | 3000/- |
| 15 | 24 ಕಲಶಾಭಿಷೇಕ | 1000/- | 37 | ನಂದಾದೀಪ (1 ತಿಂಗಳಿಗೆ) | 1100/- |
| 16 | 54 ಕಲಶಾಭಿಷೇಕ | 1500/- | 38 | ಶ್ರೀ ಬೃಹತ್ ಕಲಿಕುಂಡ ಯಂತ್ರಾರಾಧನೆ | 8000/- |
| 17 | 108 ಕಲಶಾಭಿಷೇಕ | 3000/- | 39 | ಶ್ರೀ ಬೃಹತ್ ಪದ್ಮಾವತೀದೇವಿ ಆರಾಧನೆ | 9000/- |
| 18 | ಉಪನಯನ ಸಂಸ್ಕಾರ (ವ್ರತ ಸ್ವೀಕಾರ) | 2000/- | 40 | ಬೃಹತ್ ನವಗ್ರಹ ಶಾಂತಿ | 10000/- |
| 19 | ಚೌಲ ಕರ್ಮ | 2000/- | 41 | ಅಮ್ಮನವರ ವಿಶೇಷ ಬೆಳ್ಳಿ ಅಲಂಕಾರ | 1500/- |
| 20 | ತುಲಾಭಾರ ಸೇವೆ | 1100/- | 42 | ಅಮ್ಮನವರ ವಿಶೇಷ ಸ್ವರ್ಣಾಲಂಕಾರ | 5000/- |
| 21 | ಲಕ್ಷ ಹೂವಿನ ಪೂಜೆಗೆ ಕಾಣಿಕೆ | 1100/- | 43 | ಕಾಳಸರ್ಪ ದೋಷ ಶಾಂತಿ | 3500/- |
| 22 | ಲಕ್ಷ ದೀಪೋತ್ಸವಕ್ಕೆ ಕಾಣಿಕೆ | 1100/- | 44 | ಲಘು ಶಾಂತಿ ಹೋಮ | 3000/- |

ವಿಜ್ಞಾಪನೆಗಳು : 1) ಶ್ರೀ ಕ್ಷೇತ್ರದಲ್ಲಿರುವ ವಿದ್ಯಾರ್ಥಿಗಳಿಗೆ ಮತ್ತು ಬರುವ ಯಾತ್ರಿಕರಿಗೆ ಧರ್ಮಾರ್ಥ ಊಟ ಮತ್ತು ಉಪಾಹಾರದ ವ್ಯವಸ್ಥೆಗಳಿವೆ. ಈ ಬೃಹತ್ ಧರ್ಮಕಾರ್ಯಕ್ಕೆ ಎಲ್ಲಾ ಧರ್ಮಾನುರಾಗಿಗಳು ಉದಾರ ಕೊಡುಗೆಯನ್ನು ನೀಡಿ ಪುಣ್ಯ ಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇವೆ. 2) ಪೂಜಾ ಧ್ರುವನಿಧಿ ಮೊಬಲಗು ರೂ. 3000-00.

ಸೂಚನೆಗಳು : 1) ಶ್ರೀ ಕ್ಷೇತ್ರದಲ್ಲಿರುವ ಜಿನಾಲಯಗಳ ಗರ್ಭಗುಡಿ ಪ್ರವೇಶಿಸಿ ಭಕ್ತಾದಿಗಳು ಸ್ವತಃ ಪೂಜೆ ಮತ್ತು ಸೇವೆಸಲ್ಲಿಸುವುದನ್ನು ನಿಷೇಧಿಸಲಾಗಿದೆ. 2) ಶ್ರೀ ಕ್ಷೇತ್ರದಲ್ಲಿರುವ ಬಸದಿಗಳಲ್ಲಿ ಭಕ್ತಾದಿಗಳು ಅಪೇಕ್ಷಿಸುವ ಯಾವುದೇ ರೀತಿಯ ಪೂಜೆ ಮತ್ತು ಸೇವೆಗಳನ್ನು ನೆರವೇರಿಸಿಕೊಡುವ ಅವಕಾಶವನ್ನು ಕಾದಿರಿಸಲಾಗಿದೆ. ಈ ವಿಚಾರದಲ್ಲಿ ಶ್ರೀಮಠದ ಪರಮಪೂಜ್ಯ ಮಹಾಸ್ವಾಮಿಗಳವರ ನಿರ್ಣಯವೇ ಅಂತಿಮವಾದುದು.

ದಿನಾಂಕ : 01-07-2024

ಆಡಳಿತಾಧಿಕಾರಿ
ಶ್ರೀ ಹೊಂಬುಜ ಜೈನಮಠ, ಶಿವಮೊಗ್ಗ ಜಿಲ್ಲೆ - 577 436

ಗುರುದೇವ
GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ.
ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬.

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722